ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

**ಸಿಸಿ 37/2017 ಸಿಡಬ್ಲೂಃ 11 ಪಿ ಡಬ್ಲೂಃ 9**

| | |
|---|---|
| ಹೆಸರು | ಕಾರ್ತಿಕ್ |
| ತಂದೆಯ ಹೆಸರು | ರಾಮಚಂದ್ರ |
| ವಯಸ್ಸು | 30 ವರ್ಷ |
| ವೃತ್ತಿ | ಫ್ಲಂಬಿಂಗ್ |
| ವಾಸ | ಬ್ರಹ್ಮಪುರ |

ದಿನಾಂಕಃ 11.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ

1. ಸಾಕ್ಷಿ ನಿಪಿ 1 ಅನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ1(ಬಿ) ಎಂದು ಗುರುತಿಸಲಾಗಿದೆ. ಚಾಸಾ4 ಶಿವಮ್ಮ ನಮ್ಮ ಮನೆಯ ಪಕ್ಕದಲ್ಲಿ ವಾಸವಾಗಿದ್ದು, ಪೊಲೀಸರು ಅವರ ಮನೆಯ ಬಳಿ ಬಂದಿರುತ್ತಾರೆ. ಆಗ ಪೊಲೀಸರು ನಿಪಿ1 ಕ್ಕೆ ನನ್ನ ಸಹಿಯನ್ನು ಪಡೆದಿರುತ್ತಾರೆ ಹಾಗೂ ಪೊಟೋವನ್ನು ತೆಗೆದಿರುತ್ತಾರೆ. ಸಾಕ್ಷಿ ನಿಪಿ 2 ಅನ್ನು ನೋಡಿ ತಾವು ಇರುವುದನ್ನು ಗುರುತಿಸಿರುತ್ತಾರೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಹಾಗೂ ಪಂಚನಾಮೆಯ ವಿಚಾರವಾಗಿ ನನ್ನ ಪೊಟೋವನ್ನು ತೆಗೆದಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಮುದ್ದೆ ಮಾಲನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸದರಿ ಸಹಿಯನ್ನು ಸುಮಾರು 6-7 ವರ್ಷಗಳ ಹಿಂದೆ ಹಾಕಿರುತ್ತೇನೆ.

ನನ್ನನ್ನು ಹೊರತು ಪಡಿಸಿ ಚಾಸಾ 10 ರವರು ನನ್ನೊಂದಿಗೆ ಸಹಿ ಮಾಡಿರುತ್ತಾರೆ. ಬೇರೆ ಯಾರು ಅಲ್ಲಿಗೆ ಬಂದಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎ ಪಿ ಪಿರವರು ಅನುಮತಿ ಕೋರುತ್ತಿದ್ದು, ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.

ಪಾಟೀ ಸವಾಲುಃ ಎ ಪಿ ಪಿ ರವರಿಂದಃ

2. ದಿಃ 30.03.2017 ರಂದು ಪೊಲೀಸರು ನನ್ನನ್ನು ಹಾಗೂ ಚಾಸಾ 10 ರವರನ್ನು ಪಂಚನಾಮೆಗೆ ಬರಲು ಕೋರಿದ್ದು, ಆ ಪ್ರಕಾರ ನಾವು ಒಪ್ಪಿಕೊಂಡು ಚಾಸಾ 3 ರವರು ತೋರಿಸಿದ ಸ್ಥಳಕ್ಕೆ ಹೋಗಿದ್ದು, ಸದರಿ ಸ್ಥಳದಲ್ಲಿ ಪೊಲೀಸರು ಸ್ಥಳದ ವಿದ್ಯಮಾನಗಳನ್ನು ನಮೂದು ಮಾಡಿ ನಿಪಿ 1 ರಂತೆ ಪಂಚನಾಮೆಯನ್ನು ಮಾಡಿ ಚಾಸಾ 3 ರವರು ಹಾಜರುಪಡಿಸಿರುವ ಮುದ್ದೆ ಮಾಲು 1 ರಿಂದ 3 ಅನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 1 ಅನ್ನು ನಮಗೆ ಓದಿ ಹೇಳಿ ನನ್ನ, ಚಾಸಾ 3 ಮತ್ತು 10 ರವರ ಸಹಿಗಳನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಬೆಳಗ್ಗೆ 10 ರಿಂದ 11 ಗಂಟೆಯವರೆಗೂ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಚಾಸಾ 3 ರವರು ಹಾಜರುಪಡಿಸಿರುವ ಮುದ್ದೆ ಮಾಲುಗಳನ್ನು ಪೊಲೀಸರು ನಮ್ಮ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 2 ಮತ್ತು 3 ರವರ ಪೋಟೋಗಳನ್ನು ಪಂಚನಾಮೆಯ ಸಮಯದಲ್ಲಿ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ನಿಪಿ 2 ಮತ್ತು 3 ಪೋಟೋವನ್ನು ಯಾವ ಕಾರಣಕ್ಕೆ ತೆಗೆದಿದ್ದಾರೆ ಎಂದು ಗೊತ್ತಿಲ್ಲ ಎಂದು

ನುಡಿಯುತ್ತಾರೆ. ಆರೋಪಿತರ ಪರಿಚಯವಿದ್ದು, ಆರೋಪಿತರಿಗೆ ಸಹಾಯ ಮಾಡಬೇಕೆಂಬ ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

*ಓ ಹೇ ಕೆ ಸ ಇ ಒ*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು*

*ಶ್ರೀರಂಗಪಟ್ಟಣ.*